# ನಂದಿಮಿತ್ರನ ಉಪವಾಸ

ಬ್ರಹ್ಮಚಾರಿ ನಾರಾಯಣ

ಹಳೆಗನ್ನಡದ ಪ್ರಸಿದ್ಧ ಗ್ರಂಥವಾದ "ವಡ್ಡಾರಾಧನೆ"ಯಲ್ಲಿ ಬರುವ ಒಂದು ಕಥೆ ಇದು. ಇದನ್ನು ಸರಳ ಕನ್ನಡದಲ್ಲಿ ನಿರೂಪಿಸಿ ರುವ ಬ್ರಹ್ಮಚಾರಿ ನಾರಾಯಣ ಅವರು ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವರು.

**ಅವಂತಿ ದೇಶದಲ್ಲಿ** ಪರಾಳಕೂಟವೆಂಬುದೊಂದು ಊರು. ಅಲ್ಲಿ ದೇವಿಲನೆಂಬ ಒಬ್ಬ ವ್ಯಾಪಾರಿಯಿದ್ದ. ಅವನ ಪತ್ನಿ ಪೃಥ್ವಿಶ್ರೀ. ಪಾಪಕರ್ಮದ ಜೀವವೊಂದು ಅವಳ ಗರ್ಭವನ್ನು ಸೇರಿ ಆಕೆ ಗರ್ಭ ವತಿಯಾದೊಡನೆ ದೇವಿಲನ ಸಂಪತ್ತು ಕ್ಷಯಿಸತೊಡಗಿತು. ಒಂದು ಸಲ ದೇವಿಲ ಹಲವು ಬಂಡಿಗಳಲ್ಲಿ ಹತ್ತಿ, ಧಾನ್ಯಗಳನ್ನು ಹೇರಿ ಊರಿಂದೂರಿಗೆ ಸಾಗಿಸುತ್ತಿದ್ದ; ಆಗ ಕಳ್ಳರು ಮುತ್ತಿಗೆ ಹಾಕಿ ಅವನ ಮೇಲೆ ಬಿದ್ದು ಅವನನ್ನೂ ಅವನ ಬಳಗದವರನ್ನೂ ಇರಿದು ಕೊಂದರು. ಸಂಪತ್ತೆಲ್ಲವೂ ಕಳ್ಳರ ವಶವಾಯಿತು. ಕೆಲವೇ ಸಮಯದ ನಂತರ ಪೃಥ್ವಿಶ್ರೀ ಗಂಡುಮಗುವೊಂದನ್ನು ಹೆತ್ತಳು. ಮಗುವಿಗೆ ನಂದಿಮಿತ್ರ ಎಂದು ಹೆಸರಿಡಲಾಯಿತು. ಆದರೆ ಎರಡು ಮೂರು ತಿಂಗಳಲ್ಲಿ ಪೃಥ್ವಿಶ್ರೀ ತೀರಿಕೊಂಡಳು. ನಿರ್ಗತಿಕ ಮಗುವನ್ನು ಪೃಥ್ವಿಶ್ರೀಯ ಬಂಧುಗಳು ಸಾಕಿದರು. ಮಗು ಬೆಳೆಯಿತು; ಅದು ಬೆಳೆಯುತ್ತಿದ್ದಂತೆ ಅದನ್ನು ಸಾಕಿದವರು ಒಬ್ಬೊಬ್ಬರಾಗಿ ಸತ್ತರು. ಇದೆಲ್ಲವನ್ನೂ ನೋಡಿದ ಊರ ಜನರು, "ಈ ಮಗು ಊರಲ್ಲಿದ್ದರೆ ನಮಗೆಲ್ಲ ಕೇಡು" ಎಂದು ಭಯಗೊಂಡು ಅದನ್ನು ಊರಿನಿಂದ ಹೊರಗಟ್ಟಿದರು. ನಂದಿಮಿತ್ರ ಊರೂರು ಅಲೆದು ಭಿಕ್ಷೆ ಬೇಡುತ್ತ ಹೇಗೋ ಬೆಳೆದು ಹದಿನೈದು-ಹದಿನಾರು ವರ್ಷದ ಹುಡುಗನಾದ.

ನಂದಿಮಿತ್ರ ವೈದಿಶ ಎಂಬ ಪಟ್ಟಣದತ್ತ ಬಂದ. ಅದು ಅವಂತಿ ದೇಶದ ರಾಜಧಾನಿ. ಅಲ್ಲಿ ಕಾಷ್ಠಕೂಟನೆಂಬಾತ ಕಟ್ಟಿಗೆ ಹೊರೆ ಹೊತ್ತು ಪಟ್ಟಣಕ್ಕೆ ಸಾಗಿಸುತ್ತಿದ್ದ. ನಂದಿಮಿತ್ರ ಅವನನ್ನು ನೋಡಿ, ಅವನ ಹಿಂದೆಯೇ ಹೋದ. ಪಟ್ಟಣದ ಹೊರಪ್ರದೇಶದ ಒಂದು ಉದ್ಯಾನಕ್ಕೆ ಬಂದ ಕಾಷ್ಠಕೂಟ, ಅತಿಯಾದ ಆಯಾಸದಿಂದ ಕಟ್ಟಿಗೆಯನ್ನಿಳಿಸಿ ಒಂದೆಡೆ ಮಲಗಿದ. ಅದನ್ನು ನೋಡಿದ ನಂದಿಮಿತ್ರ ತಾನೂ ಮಲಗಬಯಸಿದ. ಆದರೆ ತಲೆಯಡಿಗೆ ಏನನ್ನಿಡಲಿ? ಪಕ್ಕದಲ್ಲೆಲ್ಲ ಹುಡುಕಾಡಿ ಒಂದು ಕಲ್ಲನ್ನು ಹೊತ್ತುತಂದ. ಕಾಷ್ಠಕೂಟ ನೋಡಿದ—ಅಬ್ಬಾ, ಎಂಟು ಜನರಿಂದಲೂ ಎತ್ತಲಾಗದ ಒಂದು ಭಾರಿ ಕಲ್ಲನ್ನು ಹೊತ್ತುತಂದು ತಲೆಯಡಿಗಿಟ್ಟು ಮಲಗಿದ್ದಾನೆ ಈ ಹುಡುಗ!—ಎಂದು ಆಶ್ಚರ್ಯಪಟ್ಟು ಅವನನ್ನು ಮನೆಗೆ ಕರೆದುಕೊಂಡು ಹೋದ. ಅವನಿಗೆ ಊಟ ಹಾಕಿದ ಬಳಿಕ ಕೇಳಿದ, "ಪಟ್ಟಣದಲ್ಲಿ ನಿನಗೆ ಯಾರಾದರೂ ಬಂಧುಗಳಿದ್ದಾರೆಯೇ?" "ಇಲ್ಲ" ಎಂದ ನಂದಿಮಿತ್ರ. "ಹಾಗಾದರೆ ನೀನಿಲ್ಲೇ ನನ್ನೊಂದಿಗಿರು. ಬೇರೆಲ್ಲಿಗೂ ಹೋಗಬೇಡ,"ಎಂದ. ತನ್ನ ಪತ್ನಿ ಜಯಘಂಟೆಗೆ "ಇವನಿಗೆ ಹೊಟ್ಟೆ ತುಂಬಾ ಅನ್ನ ಹಾಕಬೇಡ; ಎಣ್ಣೆ, ಬಟ್ಟೆ ಇತ್ಯಾದಿ ಕೊಡಬೇಡ" ಎಂದು ಆದೇಶಿಸಿದ. ಪ್ರತಿದಿನವೂ ಕಾಷ್ಠಕೂಟ ಹತ್ತುಜನ ಹೊರಬಲ್ಲ ಕಟ್ಟಿಗೆಯ ಹೊರೆಯನ್ನು ನಂದಿ ಮಿತ್ರನ ತಲೆಯಮೇಲೆ ಹೊರಿಸಿ, ಪಟ್ಟಣಕ್ಕೆ ತಂದು ಮಾರುತ್ತಿದ್ದ. ಬೇಗನೆ ಕಾಷ್ಠಕೂಟ ಶ್ರೀಮಂತನಾದ. ಒಂದು ದಿನ ಹಬ್ಬದಂದು ಜಯಘಂಟೆಗೆ ನಂದಿಮಿತ್ರನ ಮೇಲೆ ಅತೀವ ಕರುಣೆ ಉಕ್ಕಿ ಬಂತು. ಅವನಿಗೆ ಹೊಟ್ಟೆತುಂಬಾ ಬಡಿಸಿದಳು. ಮರುದಿನ ಕಾಷ್ಠಕೂಟ ನೊಂದಿಗೆ ಕಟ್ಟಿಗೆ ತರಲು ಹೋದಾಗ ನಂದಿಮಿತ್ರ "ನನಗೆ ಉಡುವುದಕ್ಕೆ ಬಟ್ಟೆಯೇ ಇಲ್ಲ. ಒಂದು ಕಾಸಿಗಾದರೂ ಬಟ್ಟೆ ಕೊಡಿಸಿ" ಎಂದು ಕೇಳಿಕೊಂಡ. "ಆಗಲಿ, ಕೊಡಿಸುತ್ತೇನೆ" ಎಂದ ಕಾಷ್ಠಕೂಟ ಅವನೊಂದಿಗೆ ಮನೆಗೆ ಬಂದ. ಜಯಘಂಟೆಯನ್ನು ಪ್ರತ್ಯೇಕ ಕರೆದು, "ಈತನಿಗೆ ಹೊಟ್ಟೆತುಂಬ ಊಟ ಹಾಕಿದೆಯಾ?" ಎಂದು ಗದರಿಸಿ ಕೇಳಿದ. "ನಿನ್ನೆ ಹಬ್ಬವಲ್ಲವೆ? ಪಾಪ, ಇಂದಾದರೂ ಉಣ್ಣಲಿ ಎಂದು ಹೊಟ್ಟೆತುಂಬ ಬಡಿಸಿದೆ" ಎಂದಳು ಜಯಘಂಟೆ. ಕೋಪದಿಂದ ಕೆಂಡಮಂಡಲನಾದ ಕಾಷ್ಠಕೂಟ ಅವಳನ್ನು ಸಾಯುವಂತೆ ಬಡಿದು ಒದ್ದು ಹೊರಗಟ್ಟಿಬಿಟ್ಟ. ನಂದಿಮಿತ್ರ ಅವಳ ಬಳಿಗೆ ಹೋಗಿ, "ಅಮ್ಮಾ, ನಿನ್ನನ್ನೇಕೆ ಆತ ಬಡಿದ?" ಎಂದು ಕೇಳಿದ. "ನಿನಗೆ ಚೆನ್ನಾಗಿ ಊಟ ಹಾಕಿದೆ ಅಂತ ಕೋಪದಿಂದ ಬಡಿದ" ಎಂದಳಾಕೆ. ನಂದಿಮಿತ್ರನಿಗೆ ಖೇದವುಂಟಾಯಿತು. "ನಾನು ಹೋದಲೆಲ್ಲ ಹೀಗೇಕಾಗುತ್ತಿದೆ ? ನಾನಿದ್ದಲ್ಲೆಲ್ಲ ಅನಾಹುತವೇ ಉಂಟಾಗುತ್ತಿದೆ," ಎಂದು ಯೋಚಿಸುತ್ತ, ತಾನು ಏಕಾಕಿಯಾಗಿ ಜೀವನ ನಡೆಸುವೆನೆಂದು ಮನೆ ಬಿಟ್ಟು ಹೊರಟುಹೋದ. ತಾನೊಬ್ಬನೇ ಕಟ್ಟಿಗೆ ಶೇಖರಿಸಿ ಮಾರತೊಡಗಿದ. ಹೇಗೋ ಹೊಟ್ಟೆ ಹೊರೆದು ಜೀವಿಸುತ್ತಿದ್ದ.

ಒಂದು ಸಲ ಕಟ್ಟಿಗೆ ತರಲು ಕಾಡಿಗೆ ಹೋಗಿದ್ದ ನಂದಿಮಿತ್ರ. ಅಲ್ಲಿ ಜೈನ ಮುನಿ ಶಿವಗುಪ್ತಾಚಾರ್ಯರನ್ನು ಸಂಧಿಸಿದ. ಅವರು ಉಪವಾಸವ್ರತದ ಅಂತ್ಯದಲ್ಲಿ ಪಾರಣೆಗಾಗಿ ಭಿಕ್ಷೆ ಬೇಡಲು ಪಟ್ಟಣಕ್ಕೆ ಹೋಗುತ್ತಿದ್ದರು. ಅದನ್ನು ನೋಡಿದ ನಂದಿಮಿತ್ರ, ಅವರ ಹಿಂದೆಯೇ ಹೋದ. ಶಿವಗುಪ್ತಾಚಾರ್ಯರು ಭಿಕ್ಷೆ ಬೇಡುತ್ತ ಅರಮನೆಗೆ ಹೋದರು. ರಾಜ ಜಯವರ್ಮ ಪಾರಣೆಗಾಗಿ ಅವರನ್ನು ಆಹ್ವಾನಿಸಬಯಸಿ, ಬೇರಾರೂ ಅವರಿಗೆ ಪಾರಣೆ ಮಾಡಿಸಬಾರದೆಂದು ಡಂಗುರ ಹೊಡೆಸಿದ್ದ. ಹಾಗಾಗಿ ಆಚಾರ್ಯರಿಗೆ ಬೇರೆಲ್ಲೂ ಭಿಕ್ಷೆ ಸಿಕ್ಕಿರಲಿಲ್ಲ. ರಾಜ ಅವರನ್ನು ಭಕ್ತಿ ಗೌರವದಿಂದ ಆಹ್ವಾನಿಸಿದ. ಅರಮನೆಯ ಎಲ್ಲರೂ ಅವರಿಗೆ ನಮಸ್ಕರಿಸಿ, ಜೊತೆಯಲ್ಲಿದ್ದ ನಂದಿಮಿತ್ರನಿಗೂ ನಮಸ್ಕರಿಸಿದರು. ಇಬ್ಬರ ಕಾಲನ್ನೂ ತೊಳೆದು, ಅವರನ್ನು ಕುಳ್ಳಿರಿಸಿ, ಚಿನ್ನದ ತಟ್ಟೆಗಳನ್ನಿಟ್ಟು ನಾನಾ ಬಗೆಯ ಭಕ್ಷ್ಯ ಭೋಜ್ಯಗಳನ್ನು ಬಡಿಸಿದರು. ಹುಟ್ಟಿದ ಬಳಿಕ ಇಂಥ ಆಹಾರ ಪದಾರ್ಥಗಳನ್ನು ಕನಸಿನಲ್ಲೂ ಕಂಡರಿಯದ ನಂದಿಮಿತ್ರ ಕೇವಲ ಇವರ ಸಂಪರ್ಕದಿಂದಲೇ ಇಷ್ಟೆಲ್ಲ ಆಯಿತಲ್ಲ ಎಂದು ಭಾವಿಸುತ್ತ ಕಂಠಪೂರ್ತಿಯಾಗುವವರೆಗೂ ಉಂಡ. ಶಿವಗುಪ್ತಾಚಾರ್ಯರು ರಾಜ, ರಾಣಿಯರನ್ನು ಹರಸಿ ಅಲ್ಲಿಂದ ಹೊರಟರು. ನಂದಿಮಿತ್ರ ಅವರ ಹಿಂದೆಯೇ ಹೋದ. ಆಚಾರ್ಯರು ಬಸದಿಗೆ ಹೋಗಿ

ಪ್ರದಕ್ಷಿಣೆ ಮಾಡಿ, ಒಳಕ್ಕೆ ಹೋಗುತ್ತಿದ್ದಾಗ ನಂದಿಮಿತ್ರ ಯೋಚಿಸಿದ—"ಇಂಥ ಜೀವನ ನಡೆಸಿದರೆ ಅವರಂತೆಯೇ ಗೌರವ, ಪೂಜೆ ಎಲ್ಲವೂ ನನಗೆ ದೊರಕುವುದು. ಉತ್ತಮ ಊಟೋಪಚಾರ ಸಿಗುವುದು." ಆಚಾರ್ಯರು ಹೊರಬಂದು ತಮ್ಮ ಜಪತಪಾದಿಗಳನ್ನು ಮುಗಿಸಿದರು. ನಂದಿಮಿತ್ರ ಅವರ ಬಳಿಗೆ ಹೋಗಿ ಕೈಮುಗಿದು, "ಸ್ವಾಮಿ, ನನ್ನನ್ನು ನಿಮ್ಮಂತೆ ಮಾಡಿ"—ಎಂದ. ಶಿವಗುಪ್ತಾಚಾರ್ಯರು ಅವನನ್ನು ನೋಡಿದರು. ಅವನು ಅಲ್ಪಾಯುಷ್ಯನೆಂದೂ ಅವನ ಪಾಪವೆಲ್ಲ ಕ್ಷೀಣವಾಗಿ ಅಲ್ಪಕಾಲದಲ್ಲೇ ಮೋಕ್ಷಗಾಮಿಯಾಗುವನೆಂದೂ ಅವರಿಗೆ ತಿಳಿಯಿತು. ಒಳ್ಳೆಯ ಮುಹೂರ್ತದಲ್ಲಿ ಅವನಿಗೆ ತಪಸ್ಸಿನ ದೀಕ್ಷೆ ನೀಡಿದರು. ನಂದಿ ಮಿತ್ರ ಉಪವಾಸವ್ರತದೊಂದಿಗೆ ತಪಸ್ಸನ್ನು ಆರಂಭಿಸಿದ.


ಕಲೆ : ಬ್ರ.ನಾರಾಯಣ

ಆಚಾರ್ಯರೊಂದಿಗೆ ತಮ್ಮಲ್ಲಿಗೆ ಬಂದು ಪಾರಣೆ ಮಾಡಿಹೋದ ಬ್ರಹ್ಮಚಾರಿ ತಪಸ್ಸನ್ನು ಕೈಗೊಂಡಿದ್ದಾರೆಂದು ರಾಜನಿಗೆ ತಿಳಿಯಿತು. ಉಪವಾಸಾಂತ್ಯದಲ್ಲಿ ಆ ಕಿರಿಯ ಸ್ವಾಮಿಗಳನ್ನು ಪಾರಣೆಗೆ ಕರೆಯಬೇಕೆಂದು ಜಯವರ್ಮ ನಿಶ್ಚಯಿಸಿದ. ಮರುದಿನ ಅವನು ಸಕಲ ಪರಿವಾರದೊಂದಿಗೆ ರಾಜವೈಭವದಿಂದ ಶಿವಗುಪ್ತಾಚಾರ್ಯರ ಬಳಿಗೆ ಬಂದ. ಮೊದಲು ಬಸದಿಗೆ ಪ್ರದಕ್ಷಿಣೆ ಬಂದು ದೇವರ ಪೂಜೆ, ಅರ್ಚನೆಗಳನ್ನು ಮಾಡಿದ. ಅನಂತರ ಶಿವಗುಪ್ತಾಚಾರ್ಯರಿಗೆ ನಮಸ್ಕರಿಸಿ, ತಾನು ಬಂದ ಕಾರಣ ತಿಳಿಸಿದ. "ಆಚಾರ್ಯರೆ, ಕಿರಿಯ ಸ್ವಾಮಿಗಳನ್ನು ನಾನು ಪಾರಣೆಗೆ ಕರೆಯಬೇಕೆಂದಿದ್ದೇನೆ" ಎಂದ. "ಆಗಲಿ, ಅವರನ್ನೇ ಹೋಗಿ ಕೇಳಿ" ಎಂದರು ಆಚಾರ್ಯರು. ಈ ಮಾತುಗಳನ್ನು ಕೇಳಿಸಿಕೊಂಡ ನಂದಿ ಮಿತ್ರ, "ಸಾಮಂತ ಮಹಾಸಾಮಂತರ ಒಡೆಯನಾದ ರಾಜನೇ ತನ್ನಲ್ಲಿಗೆ ಬಂದು ದೈನ್ಯದಿಂದ ಈ ರೀತಿ ಪ್ರಾರ್ಥಿಸುವುದೆಂದರೇನು? ಏನಾಶ್ಚರ್ಯ! ಇದೆಲ್ಲವೂ ತಪಸ್ಸಿನ ಫಲ. ಇನ್ನೂ ತಪಸ್ಸು ಮಾಡಿದರೆ ಇನ್ನೂ ಹೆಚ್ಚಿನ ಫಲ ಉಂಟಾಗದಿರದು!" ಎಂದುಕೊಂಡು, ಆ ದಿನವೂ ಉಪವಾಸ ಕೈಗೊಂಡ. ಶಿವಗುಪ್ತಾಚಾರ್ಯರು ಅವನ ಬಳಿಗೆ ಹೋಗಿ ರಾಜನ ಬಯಕೆಯನ್ನು ತಿಳಿಸಿದಾಗ ತಾನು ಇಂದೂ ಉಪವಾಸ ಮಾಡಲು ನಿಶ್ಚಯಿಸಿದ್ದಾಗಿ ನಂದಿಮಿತ್ರ ಹೇಳಿದ. ಇದನ್ನು ಕೇಳಿ ಅರಸನ ಮುಖ ಬಾಡಿತು; ಅವನು ಅರಮನೆಗೆ ಮರಳಿದ.

ಕಿರಿಯ ಸ್ವಾಮಿಗಳು ಪಾರಣೆಗೆ ಒಪ್ಪದುದನ್ನು ಅರಿತ ರಾಣಿ, ಮರುದಿನ ತಾನು ಅವರನ್ನು ಪಾರಣೆಗೆ ಕರೆತರುತ್ತೇನೆ, ಎಂದುಕೊಂಡು ಹಲವು ಮಂದಿ ಪರಿಚಾರಿಕೆಯರು, ಅಂತಃಪುರಸ್ತ್ರೀಯರು ಮೊದಲಾದವರೊಂದಿಗೆ ವೈಭವದಿಂದ ಶಿವಗುಪ್ತಾಚಾರ್ಯರ ಬಳಿಗೆ ಹೋದಳು. ಪಾರಣೆಗೆ ಬರಬೇಕೆಂದು ನಂದಿಮಿತ್ರನನ್ನು ಪ್ರಾರ್ಥಿಸಿಕೊಂಡಳು. ನಂದಿಮಿತ್ರ ಅವಳ ಮುಖವನ್ನು ನೋಡಿ, "ಭಾರೀ ಅಲಂಕಾರ, ಉಡುಗೆ ತೊಡುಗೆಗಳಿಂದ ವಿಭೂಷಿತಳಾದ ಇಂದ್ರಪತ್ನಿಯಂತೆಯೇ ಇರುವ ರಾಣಿಯೇ ತನ್ನ ಬಳಿಗೆ ಬಂದಿದ್ದಾಳೆ ಎಂದರೇನು? ತಪಸ್ಸಿನ ಫಲ ಇಷ್ಟೇ ಅಲ್ಲ; ಇನ್ನೂ ಬಹಳಷ್ಟಿರಬೇಕು" ಎಂದುಕೊಂಡು ಆ ದಿನವೂ ತಾನು ಉಪವಾಸವಿರುವುದಾಗಿ ಹೇಳಿದ. ರಾಣಿ ಖೇದದಿಂದ ಅರಮನೆಗೆ ತೆರಳಿದಳು. ಅಂದೂ ಕಿರಿಯ ಸ್ವಾಮಿಗಳು ಉಪವಾಸ ಮಾಡಿದ್ದನ್ನು ಕೇಳಿದ ಮಂತ್ರಿ ವಜ್ರಸೇನ, ಮರುದಿನ ತಾನು ಅವರಿಗೆ ಪಾರಣೆ ಮಾಡಿಸುತ್ತೇನೆ ಎಂದು ನಿರ್ಧರಿಸಿದ. ಅಂತೆಯೆ ಮರುದಿನ ಅವನು ಅವರಿದ್ದಲ್ಲಿಗೆ ಹೋದ; ಪ್ರಾರ್ಥಿಸಿಕೊಂಡ. ನಂದಿಮಿತ್ರನಿಗೆ ಇನ್ನಷ್ಟು ಆಶ್ಚರ್ಯವಾಯಿತು; ತಪಸ್ಸಿನಿಂದ ಇನ್ನೂ ದೊರಕುವುದಿದೆ— ಎಂದುಕೊಂಡು ಅಂದೂ ತಾನು ಉಪವಾಸ ಮಾಡುವೆನೆಂದು ಮಂತ್ರಿಗೆ ತಿಳಿಸಿದ. ವಜ್ರಸೇನ ಹೊರಟುಹೋದ. ಮರುದಿನ ಅರ್ಹದ್ದಾಸನೆಂಬ ದೊಡ್ಡ ವರ್ತಕನ ಸರದಿ; ಅಂದೂ ಹಾಗೆಯೇ ನಂದಿಮಿತ್ರ ಉಪವಾಸ ಮಾಡಿದ. ತಪಸ್ಸಿನಿಂದ ಇನ್ನೂ ದೊರಕುವುದಿದೆ ಎಂದು ಭಾವಿಸಿದ.

ಮರುದಿನ ಯುವರಾಜನು ನಂದಿಮಿತ್ರನ ಬಳಿಗೆ ಹೋಗಿ ಪಾರಣೆಗೆ ಬರಬೇಕೆಂದು ಕೇಳಿಕೊಂಡ. ನಂದಿಮಿತ್ರ ಯುವರಾಜನ ತೇಜಸ್ಸು, ಸತ್ವ, ಶ್ರೀ—ಇವನ್ನೆಲ್ಲ ನೋಡಿ,"ಕ್ಷತ್ರಿಯ ಪುತ್ರರೆಲ್ಲ ಬಂದು ನನ್ನನ್ನು ನಮಸ್ಕರಿಸಿದಾಗ, ಊಟಮಾಡುವುದರಲ್ಲಿ ಕಷ್ಟವೇನಿದೆ? ತಪಸ್ಸಿನ ಫಲ ಇನ್ನೂ ಇದೆ"—ಎಂದುಕೊಂಡು ಅಂದೂ ಉಪವಾಸ ಮಾಡಿದ. ಏಳನೆಯ ದಿನ ನಂದಿಮಿತ್ರ ಶಿವಗುಪ್ತಾಚಾರ್ಯರ ಬಳಿಗೆ ಬಂದ. "ಸ್ವಾಮಿ, ಇಷ್ಟು ಕಾಲ ನಾನು ಉಂಡದ್ದು ಸಾಕು. ನಾನು ಜೀವನ ಪರ್ಯಂತ ಉಪವಾಸ ವ್ರತ ಮಾಡಬೇಕು. ನನಗೆ ಅದನ್ನು ಅನುಗ್ರಹಿಸಿರಿ" ಎಂದು ಬಿನ್ನವಿಸಿಕೊಂಡ. ಅವನ ಧೈರ್ಯ, ಸತ್ವಗಳನ್ನು ಮೆಚ್ಚಿದ ಆಚಾರ್ಯರು, ಅಲುಗಾಡದೆ ಒಂದೆಡೆ ಮಲಗು ವಂತೆ ನಂದಿಮಿತ್ರನಿಗೆ ಹೇಳಿ ವ್ರತವನ್ನು ಕೊಡಿಸಿದರು. ಅವನ ಆಯುಷ್ಯ ಅಂದು ಮಾತ್ರ ಎಂದು ಅವನಿಗೆ ತಿಳಿಸಿದರು. ರಾಜ, ರಾಣಿ, ಮಂತ್ರಿ, ರಾಜಪರಿವಾರದ ನೂರಾರು ಜನ ಅಲ್ಲಿಗೆ ಬಂದು ಅರ್ಚನೆ, ಪೂಜೆ, ಮಾಡತೊಡಗಿದರು. ಅಂದು ಸೂರ್ಯಾಸ್ತವಾದ ಬಳಿಕ ದೇವರನ್ನು ಧ್ಯಾನಿಸುತ್ತಾ ನಂದಿಮಿತ್ರ ದೇಹತ್ಯಾಗ ಮಾಡಿದ. ಅನಂತರ ಉನ್ನತ ಲೋಕದಲ್ಲಿ ದೇವತೆಯಾಗಿ ಹುಟ್ಟಿ ಕ್ರಮವಾಗಿ ಮೋಕ್ಷವನ್ನು ಹೊಂದಿದನು. *